**ಪಿಡಬ್ಲೂಃ 1** **ಕ್ರಿ. ಮಿ. ನಂ.1048/2023**

ದಿನಾಂಕ 02-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ-**

1. ನಾನು ಎಂ ಎ ಪಧವೀದರೆ. ನಮ್ಮಿಬ್ಬರದ್ದು ಪ್ರೇಮ & ಅರೇಂಜ್ ಮದುವೆ ಎಂದರೆ ಸರಿ. ಮದುವೆಯಾದ ನಂತರ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಿರಿ ಎಂದರೆ ಸಾಕ್ಷಿಯು 2 ತಿಂಗಳುಗಳ ಕಾಲ ಇದ್ದೆವು ಎನ್ನುತ್ತಾರೆ. ನಾವಿಬ್ಬರು ಕೇವಲ 1 ತಿಂಗಳ ಕಾಲ ಚೆನ್ನಾಗಿದ್ದೆವು. ಎದುರುದಾರರಿಗೆ ಜೂಜಾಡುವುದು, ಕುಡಿಯುವ ಅಭ್ಯಾಸ ಇಲ್ಲ ಎಂದರೆ ಸಾಕ್ಷಿಯು ಇದೆ ಎನ್ನುತ್ತಾರೆ. ಸದರಿ ವಿಷಯವನ್ನು ನಿಮ್ಮ ಅರ್ಜಿಯಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಮದ್ಯಪಾನ ಮಾಡುತ್ತಿದ್ದರು ಎಂದು ಹೇಳಿ ಬರೆಸಿದ್ದೆ ಎನ್ನುತ್ತಾರೆ.

2. ನಿಮ್ಮ ತವರು ಮನೆಯವರು ತುಂಬಾ ಬಡವರು ಎಂದರೆ ಸಾಕ್ಷಿಯು ತುಂಬಾ ಬಡವರಲ್ಲ, ಮಧ್ಯಮವರ್ಗದವರು ಎನ್ನುತ್ತಾರೆ. ನನ್ನ ತಂದೆಗೆ ಸಂಬಂಧಿಸಿದ ಜಮೀನು ಇಲ್ಲ. ಬೆಂಗಳೂರಿನಲ್ಲಿ ನಿಮ್ಮಿಬ್ಬರ ನಡುವೆ ಮನಸ್ತಾಪ ಉಂಟಾಗಿತ್ತಾ ಎಂದರೆ ಸಾಕ್ಷಿಯು ಇಲ್ಲಿಂದಲೇ ಪ್ರಾರಂಭ ಆಗಿತ್ತು ಎನ್ನುತ್ತಾರೆ.

3. ನಿಮ್ಮ ಮದುವೆಯಾದ ನಂತರ ನೀವು ಗಂಡನ ಮನೆಯಲ್ಲಿ ವಾಸ ಮಾಡಿದ್ದೀರಿ ಎಂದು ಹೇಳಿರುವುದು ಸುಳ್ಳು, ಮದುವೆಯಾದ ತಕ್ಷಣ ಬೆಂಗಳೂರಿಗೆ ಹೋಗಿದ್ದಿರಿ ಎಂದರೆ ಸರಿಯಲ್ಲ.

4. ನಿಮ್ಮ ಗಂಡ ಈಗ ಯಾವುದೇ ಕೆಲಸ ಮಾಡುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಗಂಡ ಈಗ ಬೆಳಗುರ್ಕಿಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನೀವು ಬೆಂಗಳೂರಿನಲ್ಲಿ ವಾಸವಿದ್ದಾಗ ಹೊರಗಡೆ ಕರೆದುಕೊಂಡು ಹೋಗಬೇಕು, ಐಶಾರಾಮಿ ಜೀವನ ನಡೆಸಬೇಕೆಂದು ಕಿರುಕುಳ ಕೊಡುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮ್ಮೆಲ್ಲಾ ಬೇಡಿಕೆಗಳನ್ನು ನಿಮ್ಮ ಗಂಡ ತೀರಿಸುತ್ತಿದ್ದರು ಎಂದರೆ ಸರಿಯಲ್ಲ.

5. ಮದುವೆಯಾದ 6 ತಿಂಗಳಲ್ಲಿ ನಾನು ಗರ್ಭಿಣಿಯಾಗಿದ್ದೆ. ನೀವು ಬೆಂಗಳೂರಿನಲ್ಲಿದ್ದಾಗ ನಿಮ್ಮ ಹೆರಿಗೆಗೆಂದು ಬೆಳಗುರ್ಕಿಗೆ ಬಂದಿದ್ದಿರಿ ಎಂದರೆ ಸಾಕ್ಷಿಯು ನನಗೆ ಮಗುವಾದ 9 ತಿಂಗಳ ನಂತರ ನಾನು ಬೆಂಗಳೂರಿಗೆ ಹೋಗಿದ್ದೆ ಎನ್ನುತ್ತಾರೆ. ಅದಕ್ಕೂ ಮುಂಚೆ ನೀವು ಬೆಂಗಳೂರಿಗೆ ಹೋಗಿಲ್ಲ ಎಂದರೆ ಸರಿ. ನೀವು ಬೆಂಗಳೂರಿಗೆ ಹೋದಾಗ ನಿಮ್ಮ ಗಂಡನಿಗೆ ಹೇಳದೇ ಕೇಳದೆ ಮನೆಯಿಂದ ಹೊರಹೋಗುತ್ತಿದ್ದಿರಿ ಎಂದರೆ ಸಾಕ್ಷಿಯು ನನ್ನನ್ನು ಮನೆಯಿಂದ ಹೊರಹಾಕಿದ್ದರು, ಮನೆಗೆ ಕರೆದುಕೊಂಡಿರಲಿಲ್ಲ ಎನ್ನುತ್ತಾರೆ.

6. 2023 ಸೆಪ್ಟಂಬರ್‌ನಲ್ಲಿ ನಾನು ಮಾಡಸಿರಿವಾರದಲ್ಲಿ ವಾಸವಿದ್ದೆ. ನೀವು ಆ ಕಾಲಕ್ಕೆ ಸಿಂಧನೂರಿನಲ್ಲಿ ವಾಸವಿದ್ದಿರಿ ಎಂದರೆ ಸಾಕ್ಷಿಯು ದೂರು ಕೊಡಲು ಸಿಂಧನೂರಿಗೆ ಬಂದಿದ್ದೆ, ಇಲ್ಲಿಯೇ ಇದ್ದಿರಬಹುದು ಎನ್ನುತ್ತಾರೆ. ಆ ಕಾಲಕ್ಕೆ ನೀವು ಬಿಜೆಪಿ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಿರಿ ಎಂದರೆ ಸಾಕ್ಷಿಯು ನನ್ನ ಗಂಡನ ಅನುಮತಿಯಿಂದಲೇ ನಾನು ಆ ಕರ್ತವ್ಯ ನಿರ್ವಹಿಸುತ್ತಿದ್ದೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಮದುವೆಗಿಂತ ಮುಂಚಿನಿಂದಲೇ ರಾಜಕೀಯದಲ್ಲಿ ಓಡಾಡುತ್ತಿದ್ದೆ. ನೀವು ಕಾರ್ಯದರ್ಶಿ/ಅಧ್ಯಕ್ಷಳಾಗಿ ಕರ್ತವ್ಯ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ನಾನು ಸದಸ್ಯಳಾಗಿದ್ದೆ, ನಂತರ ಆ ಕೆಲಸವನ್ನು ಬಿಟ್ಟಿದ್ದೇನೆ ಎನ್ನುತ್ತಾರೆ. ನಿಮಗೆ ರಾಜಕೀಯದಲ್ಲಿ ಆಸಕ್ತಿ ಇರುವುದರಿಂದ ನಿಮ್ಮ ಗಂಡನನ್ನು ಬಿಟ್ಟು ಬಂದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದನ್ನು ಬಿಟ್ಟು ನೀವು ಓಡಾಡುತ್ತಿದ್ದೀರಿ ಎಂದರೆ ಸರಿಯಲ್ಲ.

7. ನೀವು ಆಕ್ಸಫರ್ಡ್ & ಕನಕದಾಸ ಪಿಯು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿಯು ಆಕ್ಸಫರ್ಡ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸಿಲ್ಲ, ಆದರೆ ಕನಕದಾಸ ಕಾಲೇಜಿನಲ್ಲಿ 6 ತಿಂಗಳುಗಳ ಕಾಲ ಕಾರ್ಯ ನಿರ್ವಹಿಸಿದ್ದೇನೆ ಎನ್ನುತ್ತಾರೆ. ಸದ್ಯ ನೀವು ಕನಕದಾಸ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿಯು ದಿ.30-05-2026 ರಂದು ನಾನು ನನ್ನ ಕರ್ತವ್ಯಕ್ಕೆ ರಾಜಿನಾಮೆ ಕೊಟ್ಟಿದ್ದೇನೆ, ನೀವು ಬೇಕೆಂದರೆ ಹೋಗಿ ವಿಚಾರಿಸಿ ಎನ್ನುತ್ತಾರೆ. ಅದೇ ರೀತಿಯಾಗಿ ನೀವು ಎಕ್ಸಲೆಂಟ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಳಾಗಿ ಕಾರ್ಯ ನಿರ್ವಹಿಸಿದ್ದೀರಿ ಎಂದರೆ ಸಾಕ್ಷಿಯು 1 ವಾರಗಳ ಕಾಲ ಹೋಗಿದ್ದೆ, ನಂತರ ನನ್ನ ಗಂಡ ಕರೆದರು, ನಾನು ಬಿಟ್ಟು ಬೆಂಗಳೂರಿಗೆ ಹೋಗಿದ್ದೆ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

C/c **2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ.,ಸಿಂಧನೂರು.**